CCE-II-RR/PR/PF/NSR/NSPR(A)/888/4046

**A**

**ಜೂನ್ 2024 ರ ಪರೀಕ್ಷೆ - 2**

**JUNE 2024 EXAMINATION - 2**

ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8 ]
Total No. of Printed Pages : 8 ]
ಒಟ್ಟು ಪ್ರಶ್ನೆಗಳ ಸಂಖ್ಯೆ : 25 ]
Total No. of Questions : 25 ]

**CCE RR/PR/PF/ NSR/NSPR**
**FULL SYLLABUS**

Question Paper Serial No.

**ಸಂಕೇತ ಸಂಖ್ಯೆ : 28-K**
**Code No. : 28-K**

# ವಿಷಯ : ಹಿಂದೂಸ್ಥಾನಿ ಸಂಗೀತ — ಶಾಸ್ತ್ರ ವಿಭಾಗ

# Subject : HINDUSTANI MUSIC — THEORY

**(ಕನ್ನಡ ಮಾಧ್ಯಮ / Kannada Medium)**

**(ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ / ಎನ್.ಎಸ್.ಆರ್. / ಎನ್.ಎಸ್.ಪಿ.ಆರ್.)**

**(Regular Repeater / Private Repeater / Private Fresh / NSR / NSPR)**

ದಿನಾಂಕ : 20. 06. 2024 ] [ Date : 20. 06. 2024

ಸಮಯ : ಮಧ್ಯಾಹ್ನ 2-00 ರಿಂದ ಸಂಜೆ 3-45 ರವರೆಗೆ ] [ Time : 2-00 P.M. to 3-45 P.M.

ಗರಿಷ್ಠ ಅಂಕಗಳು : 40 ] [ Max. Marks : 40

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

**Cut here/ಇಲ್ಲಿ ಕತ್ತರಿಸಿ**

1. ಈ ಪ್ರಶ್ನೆಪತ್ರಿಕೆಯು ಒಟ್ಟು 25 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ***ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ (ಬಾಣವನ್ನು ಅನುಸರಿಸಿ), ಎಡಬದಿ ಪಾರ್ಶ್ವವನ್ನು ಕತ್ತರಿಸಬೇಡಿ.*** ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.
6. ನಿಮಗೆ ವಿತರಿಸಲಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ( Version ) ಮತ್ತು ನಿಮ್ಮ ಪ್ರವೇಶ ಪತ್ರದಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ಒಂದೇ ಆಗಿರುವುದನ್ನು ಖಾತರಿಪಡಿಸಿಕೊಳ್ಳಿ.

ಇಲ್ಲಿಂದ ಕತ್ತರಿಸಿ

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**20. 06. 2024**

**Tear here**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ : 8 × 1 = 8**

1. ಭೂಪಾಲಿ ರಾಗದ ವಾದಿಸ್ವರ

   (A) ಆಧಾರ ಷಡ್ಜ

   (B) ಶುದ್ಧ ಗಾಂಧಾರ

   (C) ಶುದ್ಧ ರಿಷಭ

   (D) ಶುದ್ಧ ದೈವತ

2. ಪಂಡಿತ ಪಂಚಾಕ್ಷರಿ ಗವಾಯಿಗಳನ್ನು 'ಉಭಯ ಗಾಯನಾಚಾರ್ಯ' ಎಂದು ಕರೆಯುವರು. ಏಕೆಂದರೆ, ಅವರು

   (A) ಕರ್ನಾಟಕ ಸಂಗೀತದಲ್ಲಿ ಪಾಂಡಿತ್ಯವನ್ನು ಪಡೆದಿದ್ದರು

   (B) ಹಿಂದೂಸ್ಥಾನಿ ಸಂಗೀತದಲ್ಲಿ ಸಾಧನೆ ಮಾಡಿದ್ದರು

   (C) ಕರ್ನಾಟಕ ಸಂಗೀತ ಮತ್ತು ಹಿಂದೂಸ್ಥಾನಿ ಸಂಗೀತದ ಎರಡು ಪ್ರಕಾರಗಳಲ್ಲಿ ಪಾಂಡಿತ್ಯ ಪಡೆದಿದ್ದರು

   (D) ಪಾಶ್ಚಿಮಾತ್ಯ ಸಂಗೀತವನ್ನು ಮಾತ್ರ ಅಭ್ಯಾಸ ಮಾಡಿದ್ದರು

3. ಕೆಹರವಾ ತಾಳದಲ್ಲಿರುವ ಒಟ್ಟು ಮಾತ್ರಾಗಳ ಸಂಖ್ಯೆ

(A) 08

(B) 10

(C) 12

(D) 16

4. ಪಂಡಿತ ಬಸವರಾಜ ರಾಜಗುರುರವರ ಜನ್ಮಸ್ಥಳ

(A) ಕಾಡ ಶೆಟ್ಟಿಹಳ್ಳಿ

(B) ಬಾಲಕೇಶ್ವರ

(C) ಯಲಿವಾಳ

(D) ಕುರಂದವಾಡ

5. ಮಾಲ್‌ಕೌನ್ಸ್ ರಾಗವನ್ನು ಔಡವ–ಔಡವ ರಾಗ ಎಂದು ಕರೆಯಲು ಕಾರಣ, ಈ ರಾಗದ ಆರೋಹಣ ಮತ್ತುಅವರೋಹಣದಲ್ಲಿರುವ ಸ್ವರಗಳು

(A) 7-7

(B) 6-7

(C) 5-7

(D) 5-5

6. ಸ್ವರಲಿಪಿ ಪದ್ಧತಿಯಲ್ಲಿ ಭೈರವಿ ರಾಗದ ರಿ ಗ ಧ ನಿ ಸ್ವರಗಳ ಕೆಳಗೆ ಒಂದು ಚಿಕ್ಕ ಅಡ್ಡಗೆರೆಯನ್ನು ಕೊಡಲಾಗುವುದು. ಏಕೆಂದರೆ, ಅವು

(A) ಶುದ್ಧಸ್ವರಗಳು

(B) ಕೋಮಲ ಸ್ವರಗಳು

(C) ತೀವ್ರ ಸ್ವರಗಳು

(D) ವರ್ಜ್ಯ ಸ್ವರಗಳು

7. ಹಿಂದೂಸ್ಥಾನಿ ಸಂಗೀತಕ್ಕಿರುವ ಮತ್ತೊಂದು ಹೆಸರು

(A) ದಕ್ಷಿಣಾದಿ ಸಂಗೀತ

(B) ಕರ್ನಾಟಕ ಸಂಗೀತ

(C) ಪಾಶ್ಚಿಮಾತ್ಯ ಸಂಗೀತ

(D) ಉತ್ತರಾದಿ ಸಂಗೀತ

8. 'ಶಹನಾಯ್' ವಾದ್ಯವನ್ನು ಸುಷಿರ ವಾದ್ಯ ಎಂದು ಕರೆಯುವರು ಏಕೆಂದರೆ, ಈ ವಾದ್ಯದಲ್ಲಿ ಸ್ವರೋತ್ಪತ್ತಿಯು

(A) ತಂತಿ ಮೀಟುವುದರಿಂದ ಉಂಟಾಗುತ್ತದೆ

(B) ಗಾಳಿಯ ಸಹಾಯದಿಂದ ಉಂಟಾಗುತ್ತದೆ

(C) ಲೋಹದ ಸಹಾಯದಿಂದ ಉಂಟಾಗುತ್ತದೆ

(D) ಚರ್ಮದ ಸಹಾಯದಿಂದ ಉಂಟಾಗುತ್ತದೆ

**II. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ : 8 × 1 = 8**

9. ತಾಳಲಿಪಿಯಲ್ಲಿ 'X' ಚಿಹ್ನೆಯನ್ನು ಬಳಸಲು ಕಾರಣವೇನು ?

10. ತಿಲಂಗ್ ರಾಗದ ಥಾಟ್ ಹೆಸರಿಸಿ.

11. ಮಲ್ಲಿಕಾರ್ಜುನ ಮನಸೂರರು ಯಾವ-ಯಾವ ಘರಾಣೆಗಳನ್ನು ಅಭ್ಯಾಸ ಮಾಡಿದ್ದರು ?

12. ಸಂಗೀತವನ್ನು 'ಶ್ರವಣ ಸಾಧನ ವಿದ್ಯೆ' ಎಂದು ಕರೆಯುವರು. ಏಕೆ ?

13. ವಿಜಯನಗರದ ಅರಸರ ಕಾಲದಲ್ಲಿದ್ದ ಪ್ರಮುಖ ದಾಸರನ್ನು ಹೆಸರಿಸಿ.

14. ಖಯಾಲ್ ಪದದ ಅರ್ಥವನ್ನು ವ್ಯಾಖ್ಯಾನಿಸಿ.

15. ಪಂಡಿತ ವಿಷ್ಣು ದಿಗಂಬರ ಪಲುಸ್ಕರ್‌ರವರು ದೃಷ್ಟಿ ಹೀನರಾದುದು ಏಕೆ ?

16. ಭೈರವ್ ರಾಗವನ್ನು ಉತ್ತರಾಂಗ ಪ್ರಧಾನ ರಾಗ ಎಂದು ಕರೆಯಲು ಕಾರಣವೇನು ?

**III. ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ಮೂರು ವಾಕ್ಯಗಳಲ್ಲಿ ಉತ್ತರಿಸಿ : 7 × 2 = 14**

17. ಸ್ವರಲಿಪಿಯಲ್ಲಿ ಮಂದ್ರಸಪ್ತಕ ಮತ್ತು ತಾರಸಪ್ತಕದ ಸ್ವರಗಳನ್ನು ಹೇಗೆ ಗುರುತಿಸಿವಿರಿ ?

18. ಕರ್ನಾಟಕ ಸಂಗೀತ ಮತ್ತು ಹಿಂದೂಸ್ಥಾನಿ ಸಂಗೀತದಲ್ಲಿರುವ ಎರಡು ಸಾಮ್ಯತೆಗಳನ್ನು ಬರೆಯಿರಿ.

19. ಈ ಕೆಳಗಿನ ರಾಗಗಳಲ್ಲಿ ಬೆಳಗಿನ ಮೊದಲ ಪ್ರಹರ ಮತ್ತು ರಾತ್ರಿಯ ಮೂರನೇ ಪ್ರಹರದಲ್ಲಿ ಹಾಡುವ ರಾಗಗಳಾಗಿ ವರ್ಗೀಕರಿಸಿ ಬರೆಯಿರಿ :

ಮಾಲ್‌ಕೌನ್ಸ್, ಬಿಬಾಸ್, ಬಾಗೇಶ್ರೀ, ಭೈರವಿ.

20. ಕೆಳಗಿನ ತಾಳಗಳಲ್ಲಿ ಹಿಂದೂಸ್ಥಾನಿ ಸಂಗೀತ ಮತ್ತು ಕರ್ನಾಟಕ ಸಂಗೀತದ ತಾಳಗಳಾಗಿ ವರ್ಗೀಕರಿಸಿ ಬರೆಯಿರಿ :

ದಾದರಾ, ಆದಿತಾಳ, ತೀನ್‌ತಾಳ, ತಿಶ್ರಜಾತಿ ತ್ರಿಪುಟ ತಾಳ.

21. ತಾನ್ ಮತ್ತು ತಾನ್‌ಸ್ವರ ಮಾಲಿಕಾಗಿರುವ ವ್ಯತ್ಯಾಸವನ್ನು ಬರೆಯಿರಿ.

22. ಆಹತನಾದ ಮತ್ತು ಅನಾಹತನಾದಕ್ಕಿರುವ ವ್ಯತ್ಯಾಸವನ್ನು ಉದಾಹರಣೆಯೊಂದಿಗೆ ಬರೆಯಿರಿ.

23. ಹಿಂದೂಸ್ಥಾನಿ ಸಂಗೀತವು ಕರ್ನಾಟಕದಲ್ಲಿ ಬೇರೂರಲು ಕಾರಣವೇನು ?

**IV. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ :**

24. ತಂತಿವಾದ್ಯಗಳು ಅವನದ್ಧ ವಾದ್ಯಗಳಿಗಿಂತ ಭಿನ್ನ. ಹೇಗೆ ? ಕೆಳಗೆ ಕೊಟ್ಟಿರುವ ವಾದ್ಯಗಳನ್ನು ತಂತಿ ವಾದ್ಯ, ಅವನದ್ಧ ವಾದ್ಯ, ಸುಷಿರ ವಾದ್ಯ ಮತ್ತು ಘನವಾದ್ಯಗಳಾಗಿ ವರ್ಗೀಕರಣ ಮಾಡಿ ಬರೆಯಿರಿ.

ಜಲತರಂಗ, ಸಂತೂರ್, ಪಖವಾಜ್, ಪಿಟೀಲು, ತಬಲಾ, ಕೊಳಲು, ಕಂಚಿನ ತಾಳ, ಕ್ಲಾರಿಯೋನೆಟ್. **6**

25. ಬೃಂದಾವನಿ ಸಾರಂಗ ರಾಗದ ಸ್ವರಗೀತೆಯನ್ನು ಲಿಪಿಬದ್ಧಗೊಳಿಸಿ. **4**

DO NOT WRITE ANYTHING HERE